ಕರ್ನಾಟಕ ಸರಕಾರ

# ತೋಟಗಾರಿಕೆ ಇಲಾಖೆ
# ಜಿಲ್ಲಾ ಪಂಚಾಯತ್, ಬೆಳ್ತಂಗಡಿ, ದ.ಕ.

# ಅಡಿಕೆಯ ಎಲೆ ಚುಕ್ಕೆ ರೋಗ ಮತ್ತು ಅದರ ಸಮಗ್ರ ನಿರ್ವಹಣೆ


ಪರಿಚಯ :

ಅಡಿಕೆ ಮಲೆನಾಡು ಹಾಗೂ ಕರಾವಳಿ ಪ್ರದೇಶದ ಪ್ರಮುಖ ಬಹು ವಾರ್ಷಿಕ ವಾಣಿಜ್ಯ ಬೆಳೆಯಾಗಿದ್ದು, ಕೃಷಿಕರ ಆರ್ಥಿಕ ಮತ್ತು ಸಾಮಾಜಿಕ ಸುಭದ್ರತೆ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆಯನ್ನು ಸುಮಾರು 39,396 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, 85,102 ಟನ್ ಉತ್ಪಾದನೆಯಿದೆ (2018-19).

ಈ ವಾಣಿಜ್ಯ ಬೆಳೆಯನ್ನು ರೈತರು ಬಹಳ ವರ್ಷಗಳಿಂದಲೂ ಬೆಳೆಯುತ್ತಿದ್ದರೂ ಕೆಲವೊಂದು ಋತುಮಾನಕ್ಕೆ ಅನುಗುಣವಾಗಿ ಬರುವ ಕೀಟ ಮತ್ತು ರೋಗಗಳ ಸಮಸ್ಯೆಗಳಿಂದ ಬೆಳೆಯ ಇಳುವರಿಯಲ್ಲಿ ತೀವ್ರ ಕುಸಿತ ಉಂಟಾಗುತ್ತಿದೆ. ಇಳುವರಿ ಕುಸಿತಕ್ಕೆ ಪ್ರಮುಖ ಕಾರಣಗಳೆಂದರೆ ಸಮಗ್ರ ಪೋಷಕಾಂಶಗಳ ನಿರ್ವಹಣೆ, ಕೀಟ ಮತ್ತು ರೋಗಗಳ ಹತೋಟಿ ಕ್ರಮಗಳ ಬಗ್ಗೆ ವೈಜ್ಞಾನಿಕ ಪದ್ಧತಿಗಳನ್ನು ಅನುಸರಿಸದೆ ಇರುವುದು. ಅದರಲ್ಲಿಯೂ ವಿಶೇಷವಾಗಿ ಇತ್ತೀಚಿನ ವರ್ಷಗಳಲ್ಲಿ ಕಂಡು ಬರುತ್ತಿರುವ ಎಲೆ ಚುಕ್ಕೆ ರೋಗವು ಮಾರಕ ರೋಗವಾಗಿದ್ದು,



ಕೃಷಿ ವಿಜ್ಞಾನ ಕೇಂದ್ರದ ಸಸ್ಯ ಸಂರಕ್ಷಣೆ ವಿಜ್ಞಾನಿ ಡಾ. ಕೇದಾರನಾಥ ಮತ್ತು ತೋಟಗಾರಿಕೆ ಇಲಾಖೆ ಬೆಳ್ತಂಗಡಿಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀ ಚಂದ್ರಶೇಖರ ಕೆ.ಎಸ್. ರವರು ರೈತರಿಗೆ ಎಲೆಚುಕ್ಕೆ ರೋಗದ ಲಕ್ಷಣಗಳು ಮತ್ತು ನಿರ್ವಹಣೆ ಕುರಿತು ಮಾಹಿತಿ ನೀಡುತ್ತಿರುವುದು.



ಅಡಿಕೆಯ ಎಲೆ ಚುಕ್ಕೆ ರೋಗ ಬಾಧಿತ ಗರಿ

ಅಡಿಕೆ ಇಳುವರಿಯ ಮೇಲೆ ತೀವ್ರವಾದ ದುಷ್ಪರಿಣಾಮ ಬೀರುತ್ತಿದೆ. ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲಿ ಈ ರೋಗವು ಶೇ. 60ರಷ್ಟು ಬೆಳೆಯ ಇಳುವರಿಯಲ್ಲಿ ಹಾನಿಯಾದದ್ದು ಕಂಡುಬಂದಿದೆ.

## ಎಲೆ ಚುಕ್ಕೆ ರೋಗದ ಲಕ್ಷಣಗಳು

ಪ್ರಾರಂಭದಲ್ಲಿ ಅಡಿಕೆ ಮರದ ಗರಿಗಳ ಮೇಲೆ ಸಣ್ಣ ಸಣ್ಣ ಗಾತ್ರದ ತಿಳಿ ಹಸಿರು/ಹಳದಿ ಬಣ್ಣ ಆವಾರಿತ ಕಂದು ಬಣ್ಣದ ಚುಕ್ಕೆಗಳು ಕಂಡು ಬರುತ್ತವೆ. ನಂತರ ಚುಕ್ಕೆಗಳ ಗಾತ್ರ ಹೆಚ್ಚಾಗಿ ಹಾಗೂ ಇಂತಹ ಚುಕ್ಕೆಗಳು ಒಂದಕ್ಕೊಂದು ಕೂಡಿಕೊಂಡು ಎಲೆಯು ಸುಟ್ಟಂತೆ ಕಾಣುವುದಲ್ಲದೆ ಎಲ್ಲಾ ಗರಿಗಳು ಒಣಗಿ ಸತ್ತು ಹೋಗುತ್ತವೆ. ರೋಗಪೀಡಿತ ಬೆಳೆಯ ಬೆಳವಣಿಗೆ ಕುಂಠಿತವಾಗಿ ಇಳುವರಿ ಗಣನೀಯವಾಗಿ ಕಡಿಮೆಯಾಗುತ್ತದೆ.

ಎಲೆ ಚುಕ್ಕೆ ರೋಗದ ತೀವ್ರತೆಗೆ ಪ್ರಮುಖ ಕಾರಣಗಳು

- ತೋಟಗಳಲ್ಲಿ ವೈಜ್ಞಾನಿಕ ಬೇಸಾಯ ಪದ್ಧತಿಗಳನ್ನು ಅನುಸರಿಸದೆ ಇರುವುದು.
- ಮಣ್ಣಿನಲ್ಲಿ ಪೋಷಕಾಂಶಗಳ ಪ್ರಮಾಣ ಕಡಿಮೆಯಿರುವುದು ಹಾಗೂ ಅವೈಜ್ಞಾನಿಕ ಪೋಷಕಾಂಶಗಳ

ಬಳಕೆ ಹಾಗೂ ವಿತರಣೆ ಮಾಡುತ್ತಿರುವುದು

- ಮಣ್ಣಿನ ರಸಸಾರವು ಕಡಿಮೆಯಿರುವುದು
- ಅವಶ್ಯಕತೆಗಿಂತ ಹೆಚ್ಚು ಸ್ಪ್ರಿಂಕ್ಲರ್ ನೀರಾವರಿ ಪದ್ಧತಿಯಿಂದ ನೀರು ಕೊಡುವುದರಿಂದ ರೋಗದ ತಿವ್ರತೆ ಹಾಗೂ ಹರಡುವಿಕೆಯು ಹೆಚ್ಚಾಗುತ್ತದೆ.
- ವಾತಾವರಣದಲ್ಲಿ ಹೆಚ್ಚಿನ ಆದ್ರತೆ ಹಾಗೂ ಉಷ್ಣಾಂಶ 24–30 AC ನಷ್ಟು ಇದ್ದಾಗ ರೋಗದ ತೀವ್ರತೆಯು ಹೆಚ್ಚಾಗುವುದು.

### ಸಮಗ್ರ ನಿರ್ವಹಣೆ

- ನಾಟಿಗೆ ರೋಗ ರಹಿತ ಸಸಿಗಳ ಬಳಕೆ ಮಾಡಬೇಕು.
- ರೋಗ ಬಾಧಿತ ಎಲೆ/ಗರಿಗಳನ್ನು ತೆಗೆದು ನಾಶಪಡಿಸಿ ತೋಟವನ್ನು ಸ್ವಚ್ಛವಾಗಿಡಬೇಕು.
- ತೋಟಗಳಲ್ಲಿ ಹೆಚ್ಚು ನೀರು ನಿಲ್ಲದಂತೆ ನೋಡಿಕೊಳ್ಳುವುದು ಹಾಗೂ ಬಸಿಗಾಲುವೆಗಳ ನಿರ್ಮಾಣ ಮಾಡಬೇಕು.
- ತೋಟಗಳಲ್ಲಿ ಅವಶ್ಯಕತೆಗೆ ತಕ್ಕಂತೆ ಮಾತ್ರ ನೀರು ಕೊಡುವುದು.
- ಮಣ್ಣು ಪರೀಕ್ಷೆ ಅಧಾರಿತ ಪೋಷಕಾಂಶಗಳ ಬಳಕೆ ಮಾಡಬೇಕು (ಪ್ರತಿ ಮರಕ್ಕೆ ಪ್ರತಿ ವರ್ಷಕ್ಕೆ 100:40:140 ಗ್ರಾಂ ಸಾರಜನಕ: ರಂಜಕ: ಪೋಟ್ಯಾಶ್ ಕೊಡಬೇಕು)
- ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಲು ಹಾಗೂ ಮಣ್ಣಿನಲ್ಲಿ ಉಪಕಾರಿ ಸೂಕ್ಷ್ಮಾಣು ಜೀವಿಗಳ ವೃದ್ಧಿಗಾಗಿ ಸಾವಯವ ಹಾಗೂ ಹಸಿರೆಲೆ ಗೊಬ್ಬರಗಳನ್ನು ಬಳಸಬೇಕು.
- ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುಂಚೆ (ಜೂನ್ ತಿಂಗಳ ಮೊದಲ ವಾರದಲ್ಲಿ) ಮತ್ತು ನಂತರ (ಸಪ್ಟೆಂಬರ್ ತಿಂಗಳಲ್ಲಿ) ಪ್ರತಿ ಮರದ ಬುಡಕ್ಕೆ 50 ಗ್ರಾಂ ಟ್ರೈಕೊಡರ್ಮಾ ವಿರಿಡೆ ಅಥವಾ ಟ್ರೈಕೋಡರ್ಮಾ ಹಾರ್ಜಿಯಾನಮ್ ಜೈವಿಕ



ಬೆಳ್ತಂಗಡಿ ತಾಲೂಕಿನ ಮಲವಂತಿಗೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಎಳನೀರು ಗ್ರಾಮದಲ್ಲಿ ರೈತರಿಗೆ ಮಾಹಿತಿ ನೀಡಲಾಯಿತು.

ಶಿಲೀಂಧ್ರನಾಶಕವನ್ನು 1 ಕೆ.ಜಿ. ಬೇವಿನ ಹಿಂಡಿ ಮತ್ತು 10 ಕೆ.ಜಿ. ತಿಪ್ಪೆ/ಹಟ್ಟಿ ಗೊಬ್ಬರದಲ್ಲಿ ಮಿಶ್ರಣ ಮಾಡಿ ಬುಡಕ್ಕೆ ಹಾಕುವುದು.

- ರೋಗದ ಬಾಧೆ ಕಂಡು ಬಂದಲ್ಲಿ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಅಥವಾ 2 ಗ್ರಾಂ ಕಾರ್ಬೆಂಡಜಿಮ್ + ಮ್ಯಾಂಕೋಜೆಬ್ ಅಥವಾ 1 ಮಿ.ಲೀ. ಹೆಕ್ಸಾಕೋನಜೋಲ್ 5 ಇ.ಸಿ. ಅಥವಾ 1 ಮಿ. ಲೀ. ಡೈಪೆನೊಕೋನಜೋಲ್ ಅಥವಾ 3 ಗ್ರಾಂ ಪೋಟ್ಯಾಸಿಯಮ್ ಪಾಸ್ಪೋನೆಟ್ ನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು.
- ರೊಗದ ತೀವ್ರತೆಯು ಹೆಚ್ಚಾಗಿರುವ ಪ್ರದೇಶಗಳಲ್ಲಿ 15 ದಿನಗಳ ಅಂತರದಲ್ಲಿ ಮೇಲೆ ಶಿಫಾರಸುಪಡಿಸಿದ ರೋಗನಾಶಕಗಳನ್ನು ಸಿಂಪರಣೆ ಮಾಡಬೇಕು.

**ಸೂಚನೆ:** ರಾಸಾಯನಿಕ ರೋಗನಾಶಕಗಳನ್ನು ಶಿಫಾರಸುಪಡಿಸಿದ ಪ್ರಮಾಣದಲ್ಲಿ ಸಿಂಪರಣೆ ಮಾಡಬೇಕು ಹಾಗೂ ಮೊದಲ ಸಿಂಪರಣೆಯ ನಂತರ ಬೇರೆ/ಇತರೆ ರೋಗನಾಶಕಗಳ ಬಳಕೆ ಮಾಡುವುದರಿಂದ ರೋಗವನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಬಹುದು.


*ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ*

- **ಹೆಚ್.ಆರ್. ನಾಯಕ್**, ತೋಟಗಾರಿಕಾ ಉಪನಿರ್ದೇಶಕರು, ಜಿ.ಪಂ., ಮಂಗಳೂರು ದೂರವಾಣಿ ಸಂಖ್ಯೆ : 0824–2423628
- **ಕೆ.ಎಸ್. ಚಂದ್ರಶೇಖರ್**, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಿಲ್ಲಾ ಪಂಚಾಯತ್, ಬೆಳ್ತಂಗಡಿ ದೂರವಾಣಿ : 9448336863
- **ಡಾ। ಟಿ.ಜೆ. ರಮೇಶ್**, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ (ದ.ಕ), ಮಂಗಳೂರು ದೂರವಾಣಿ ಸಂಖ್ಯೆ: 8794706468
- **ಡಾ। ಕೇದಾರನಾಥ**, ವಿಜ್ಞಾನಿಗಳು (ಸಸ್ಯ ಸಂರಕ್ಷಣೆ), ಭಾ.ಕೃ.ಅ.ಫ-ಕೃಷಿ ವಿಜ್ಞಾನ ಕೇಂದ್ರ (ದ.ಕ), ಮಂಗಳೂರು ದೂರವಾಣಿ ಸಂಖ್ಯೆ: 9482147325

• ತೋಟಗಳಲ್ಲಿ ಹಣ್ಣುಗಳನ್ನು (ಪಪಾಯ ಅಥವಾ ಅನಾನಸ್) ಅಥವಾ ಅಡಿಕೆಯ ಹಾಳೆ ಅಥವಾ ಸೋಗೆಗಳನ್ನು ತೋಟದಲ್ಲಿ ಅಲ್ಲಲ್ಲಿ ರಾಶಿ ಇಟ್ಟು ಅವಕ್ಕೆ ಆಕರ್ಷಿಸಿ ಬಂದ ಬಸವನ ಹುಳುಗಳನ್ನು ಬೆಳಗಿನ ಸಮಯದಲ್ಲಿ ಅಯ್ದು ಉಪ್ಪು (10%) ಅಥವಾ ಕಾಪರ್ ಸಲ್ಫೇಟ್ (3%) ನಿಂದ ಉಪಚರಿಸಿ ನಾಶಪಡಿಸಬೇಕು.

• ಹುಳುಗಳನ್ನು ಆಕರ್ಷಿಸಲು ಸಗಣಿ ದ್ರಾವಣ ದಿಂದ ಒದ್ದೆ ಮಾಡಿದ ಹಸಿ ಗೋಣಿ ಚೀಲಗಳನ್ನು ತೋಟದಲ್ಲಿ ಇಡುವುದರಿಂದ ಹುಳುಗಳು ಆಕರ್ಷಿತವಾಗಿ ಗೋಣಿ ಚೀಲದ ಕೆಳಗೆ ಬಂದು ಕುಳಿತುಕೊಳ್ಳುತ್ತವೆ. ಅವುಗಳನ್ನು ಸಂಗ್ರಹಿಸಿ ಉಪ್ಪು ಅಥವಾ ಕಾಪರ್ ಸಲ್ಫೇಟ್ ದ್ರಾವಣದಿಂದ ಉಪಚರಿಸಿ ನಾಶಪಡಿಸಬೇಕು.

• ಮರದ ರೆಂಬೆಗಳ ಸುತ್ತಲೂ ತಾಮ್ರ ಅಥವಾ ಅಲ್ಯೂಮಿನಿಯಂ ಹಾಳೆಗಳನ್ನು ಬಳಸುವುದರಿಂದ ಈ ಹುಳುಗಳು ಮರವನ್ನು ಹತ್ತಿ ಬೆಳೆ ನಾಶ ಮಾಡುವುದುದನ್ನು ತಡೆಯಬಹುದು.

• ಅತಿಥೇಯ ಸಸ್ಯಗಳ ಎಲೆಗಳ ಮೇಲೆ ಬೇವಿನ ಎಣ್ಣೆ ಅಥವಾ ಬೆಳ್ಳುಳ್ಳಿ ದ್ರಾವಣ (2%) ಸಿಂಪಡಿಸುವುದು.

• ಬೆಳೆಗಳಿಗೆ ಬೋರ್ಡೋ ದ್ರಾವಣದ (1%) ಮಿಶ್ರಣವನ್ನು ಸಿಂಪಡಿಸುವುದು.

• ತೋಟಗಳಲ್ಲಿ ಮೆಟಾಲ್ಡಿಹೈಡ್ ಬಳಸುವ ವಿಧಾನ

• ಮೊದಲು ರೋಗಕ್ಕೆ ತುತ್ತಾಗಿರುವ ಪ್ರದೇಶವನ್ನು ಪತ್ತೆ ಹಚ್ಚಬೇಕು.

• 100 ಚದರ ಅಡಿ ಪ್ರದೇಶದಲ್ಲಿ 50–80 ಗ್ರಾಂ ಮೆಟಾಲ್ಡಿಹೈಡ್ ರಾಸಾಯನಿಕದ ಸಣ್ಣ ಸಣ್ಣ ತುಣುಕುಗಳನ್ನು ತೋಟದಲ್ಲಿ (ಗಿಡದ ಬುಡದಲ್ಲಿ, ಎರಡು ಸಾಲುಗಳ ಮಧ್ಯ ಭಾಗದ ಪ್ರದೇಶದಲ್ಲಿ) ಇಡಬೇಕು. ಎಕರೆಗೆ ಸುಮಾರು 1.5 ಕೆಜಿಯಷ್ಟು ಮೆಟಾಲ್ಡಿಹೈಡ್ (2.5%) ಬೇಕಾಗುತ್ತದೆ. (ತೋಟದಲ್ಲಿ ಸ್ವಚ್ಛತೆಯನ್ನು ಮಾಡಿ ವಿಷ ಆಹಾರಗಳ ಇಡುವುದರಿಂದ ಸುಲಭವಾಗಿ ಬಸವನ ಹುಳುಗಳನ್ನು ಆಕರ್ಷಿಸಬಹುದು).

## ತೋಟಗಳಲ್ಲಿ ವಿಷ ಆಹಾರ ಬಳಸುವುದು

## ವಿಷ ಆಹಾರ ತಯಾರಿಸುವ ವಿಧಾನ

1 ಕೆ.ಜಿ. ಪಪಾಯ ಅಥವಾ ಅನಾನಸ್ ಅಥವಾ ಎಲೆ ಕೋಸು ತುಂಡು ಮಾಡಿ 20 ಮಿ.ಲೀ. ಮಿಥೋಮೈಲ್ ಕೀಟನಾಶಕವನ್ನು ಲೇಪಿಸಿ ಅಡಿಕೆ ಹಾಳೆ ಅಥವಾ ಗೋಣಿಚೀಲ ಮೇಲೆ ಹಾಕಿ ಸಾಯಂಕಾಲದ ಸಮಯ ತೋಟದಲ್ಲಿ ಇಡುವುದು (ಬೆಳಿಗ್ಗೆ ಬಸವನ ಹುಳುಗಳನ್ನು ಆರಿಸಿ ನಾಶಪಡಿಸಬೇಕು).

ಅಥವಾ

10 ಕೆ.ಜಿ. ಪಪಾಯ ತುಂಡು ಮಾಡಿ 40 ಗ್ರಾಂ ಥಿಯೊಡಿಕಾರ್ಬ 75 ಡಬ್ಲ್ಯೂಪಿ ಕೀಟನಾಶಕವನ್ನು ಲೇಪಿಸಿ ಅಡಿಕೆ ಹಾಳೆ ಅಥವಾ ಗೋಣಿ ಚೀಲ ಮೇಲೆ ಹಾಕಿ ಸಾಯಂಕಾಲದ ಸಮಯ ತೋಟದಲ್ಲಿ ಇಡುವುದು.

ಅಥವಾ

60 ಕೆಜಿ ಭತ್ತದ ತೌಡು ಮತ್ತು 1 ಕಿಗ್ರಾಂ ಮಿಥೋಮೈಲ ಅಥವಾ 250 ಗ್ರಾಂ ಥಿಯೊಡಿಕಾರ್ಬ 75 ಡಬ್ಲ್ಯೂಪಿ ಯನ್ನು 6 ಕೆಜಿ ಬೆಲ್ಲದ ಪಾಕಿನಲ್ಲಿ ಬೆರೆಸಿ 200–250 ಗ್ರಾಂ ನಷ್ಟು ಗಾತ್ರದ ಉಂಡೆಗಳನ್ನು ಮಾಡಿ ತೋಟದಲ್ಲಿ ಅಡಿಕೆ ಹಾಳೆ ಅಥವಾ ಸೋಗೆಗಳ ಕೆಳ ಭಾಗದಲ್ಲಿ ಇಡುವುದು.

**ಮುನ್ನೆಚ್ಚರಿಕೆ:**

ಬಳಸುವ ಸಮಯದಲ್ಲಿ ರಕ್ಷಣೆಯ ಬಟ್ಟೆಗಳನ್ನು ಹಾಗೂ ಹ್ಯಾಂಡ್ ಗ್ಲೌಸ್‌ಗಳನ್ನು ಬಳಸಬೇಕು ಹಾಗೂ ಸಾಕು ಅಥವಾ ಕಾಡು ಪ್ರಾಣಿಗಳು ವಿಷ ಆಹಾರ ತಿನ್ನದಂತೆ ಜಾಗೃತಿಯನ್ನು ವಹಿಸುವುದು.


*ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ*

• ಹೆಚ್.ಆರ್. ನಾಯಕ್, ತೋಟಗಾರಿಕಾ ಉಪನಿರ್ದೇಶಕರು, ಜಿ.ಪಂ., ಮಂಗಳೂರು ದೂರವಾಣಿ ಸಂಖ್ಯೆ : 0824–2423628

• ಕೆ.ಎಸ್. ಚಂದ್ರಶೇಖರ್, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಿಲ್ಲಾ ಪಂಚಾಯತ್, ಬೆಳ್ತಂಗಡಿ ದೂರವಾಣಿ : 9448336863

• ಡಾ। ಟಿ.ಜೆ. ರಮೇಶ್, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ (ದ.ಕ), ಮಂಗಳೂರು ದೂರವಾಣಿ ಸಂಖ್ಯೆ: 8794706468

• ಡಾ. ಕೇದಾರನಾಥ, ವಿಜ್ಞಾನಿಗಳು (ಸಸ್ಯ ಸಂರಕ್ಷಣೆ), ಭಾ.ಕೃ.ಅ.ಪ-ಕೃಷಿ ವಿಜ್ಞಾನ ಕೇಂದ್ರ (ದ.ಕ), ಮಂಗಳೂರು ದೂರವಾಣಿ ಸಂಖ್ಯೆ: 9482147325

ಕರ್ನಾಟಕ ಸರಕಾರ


# ತೋಟಗಾರಿಕೆ ಇಲಾಖೆ

# ಜಿಲ್ಲಾ ಪಂಚಾಯತ್, ಬೆಳ್ತಂಗಡಿ, ದ.ಕ.

# ಆಫ್ರಿಕನ್ ಬಸವನ ಹುಳುವಿನ ಸಮಗ್ರ ನಿರ್ವಹಣೆ

**ಪರಿಚಯ:** ಆಫ್ರಿಕಾದ ದೈತ್ಯ ಬಸವನ ಹುಳು (Achatina fulica) ವಿಶ್ವದ ಅತಿದೊಡ್ಡ ಹಾಗೂ ಅತ್ಯಂತ ಹಾನಿಕಾರಕ ಬಸವನ ಕೀಟಗಳಲ್ಲಿ ಒಂದು. ಇವು ಗ್ಯಾಸ್ಟ್ರೊಪೊಡಾ ವರ್ಗದ ಮೊಲಸ್ಕಾ ಜಾತಿಗೆ ಸೇರಿದ ದ್ವಿಲಿಂಗ ಜೀವಿಗಳು. ಪೂರ್ವ ಆಫ್ರಿಕಾ ದೇಶ ಇವುಗಳ ತವರೂರು.

ಇದು ಶಂಖದ ಆಕಾರದ ಚಿಪ್ಪಿನಲ್ಲಿ ಇರುವಂತಹ ಹಾಗೂ 2 ರಿಂದ 12 ವರ್ಷದವರೆಗೂ ಬದುಕುವ ದ್ವಿಲಿಂಗಿ ಜೀವಿಯಾಗಿದ್ದು ತನ್ನ ಜೀವಿತಾವದಿಯಲ್ಲಿ ಸುಮಾರು 1200 ರಷ್ಟು ಮೊಟ್ಟೆಗಳನ್ನು ಹಂತ ಹಂತವಾಗಿ ತೇವಾಂಶವಿರುವ ಮಣ್ಣಿನಲ್ಲಿ ಇಡುತ್ತದೆ. ಮಳೆಗಾಲ ಹಾಗೂ ತೇವಾಂಶ ಹೆಚ್ಚಾಗಿರುವ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಗಂಟೆಗೆ ಸುಮಾರು 2 ಮೀಟರ್ ನಷ್ಟು ಪ್ರದೇಶ ಚಲಿಸುತ್ತದೆ ಮತ್ತು ಇದು ಸುಮಾರು 500 ಕ್ಕಿಂತ ಹೆಚ್ಚು ಸಸ್ಯ ಪ್ರಭೇದಗಳನ್ನು ತಿನ್ನುತ್ತದೆ. ದಿನದ ಹಗಲು ಅಥವಾ ಬೆಳಕು ಹೆಚ್ಚಾಗಿರುವ ಸಮಯದಲ್ಲಿ ಗಿಡಗಳಲ್ಲಿ/ಪೊದೆಗಳಲ್ಲಿ ಅವಿತುಕೊಂಡು ಬೆಳಕು ಕಡಿಮೆಯಿರುವ ಅಥವಾ ರಾತ್ರಿ ಸಮಯದಲ್ಲಿ ಹೆಚ್ಚು ಚಟುವಟಿಕೆಯಿಂದ ಕೂಡಿ ಬೆಳೆಗಳನ್ನು ನಾಶಮಾಡುತ್ತದೆ.





ಆಫ್ರಿಕನ್ ಬಸವನ ಹುಳುವಿನ ಸಮಗ್ರ ನಿರ್ವಹಣೆ

- ತೋಟದಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು (ಇದರಿಂದ ಕೀಟಕ್ಕೆ ಅನಾನುಕುಲ ಪರಿಸರ ಉಂಟಾಗಿ ಇದರ ಸಂಖ್ಯೆ ಮತ್ತು ಹಾವಳಿ ಕಡಿಮೆಯಾಗುತ್ತದೆ).
- ತೆಂಗು ಮತ್ತು ಅಡಿಕೆ ಮರಗಳ ಬುಡಗಳ ಸುತ್ತಲೂ ಸ್ವಚ್ಛತೆ ಕಾಪಾಡುವುದು.
- ತೋಟಗಳಲ್ಲಿ ಮಾಗಿ ಅಥವಾ ಉಷ್ಣಂಶ ಹೆಚ್ಚಾಗಿರುವ ಸಮಯದಲ್ಲಿ ಭೂಮಿ ಉಳುಮೆ ಮಾಡಿ ಬಸವನ ಹುಳುವಿನ ಆವಾಸಸ್ಥಾನ ಮತ್ತು ಸಂಭಾವ್ಯ ಸಂತಾನೋತ್ಪತ್ತಿಯ ತಾಣಗಳನ್ನು ನಾಶಮಾಡುವುದು (ತೀವ್ರ ಬಾಧಿತ ತೋಟಗಳಲ್ಲಿ ವರ್ಷಕ್ಕೆ ಕನಿಷ್ಠ ಎರಡು ಬಾರಿ ಅದರೂ ಉಳುಮೆ/ಸ್ವಚ್ಛತೆಯನ್ನು ಮಾಡಬೇಕು).
- ತೀವ್ರತೆ ಹೆಚ್ಚಾಗಿರುವ ತೋಟಗಳಲ್ಲಿ ಮರಗಳ ಸುತ್ತಲೂ ಸೂಪರ್ ಫಾಸ್ಫೇಟ್ ಅಥವಾ ಬೂದಿ ಅಥವಾ ಸುಣ್ಣ ಅಥವಾ ಕಾಸ್ಟಿಕ ಸೋಡಾ ಗಳನ್ನು ಉಪಯೋಗಿಸಿ ಹುಳುಗಳ ಹಾವಳಿಯನ್ನು ತಟೆಗಟ್ಟಬಹುದು.
- ತೋಟದಲ್ಲಿ ಹೆಚ್ಚಾಗಿ ನೀರು ಅಥವಾ ತೇವಾಂಶವಿಲ್ಲದಂತೆ ನೋಡಿಕೊಳ್ಳುವುದು ಹಾಗೂ ಬಸಿಗಾಲುವೆಗಳ ನಿರ್ಮಾಣ ಮಾಡುವುದು ಸೂಕ್ತ.